# ಟಾಟಾನಿಂದ ನೂತನ ಹಿಟಾಚಿ ಬಿಡುಗಡೆ



**ಧಾರವಾಡ:** ಟಾಟಾ ಹಿಟಾಚಿ ಕನ್ಸ್ಟ್ರಕ್ಷನ್ ಮೆಷಿನರಿ ಕಂಪನಿ ಪ್ರೈವೇಟ್ ಲಿಮಿಟೆಡ್. ಧಾರವಾಡದಲ್ಲಿ ಇರುವ ತನ್ನ ತಯಾರಿಕಾ ಘಟಕದಲ್ಲಿ ನೂತನ Ex110 ಸೂಪರ್ ಸಿರೀಸ್ ಹೈಡ್ರಾಲಿಕ್ ಎಕ್ಸ್‌ಕವೇಟರ್‌ನ್ನು ಗಣ್ಯಾತಿಗಣ್ಯರ ಉಪಸ್ಥಿತಿಯಲ್ಲಿ ಟಾಟಾ ಹಿಟಾಚಿ ಕಂಪನಿ ಅಧಿಕಾರಿಗಳು ಬಿಡುಗಡೆ ಮಾಡಿದರು.

ಸಮಾರಂಭದಲ್ಲಿ ಹಾಜರಿದ್ದವರು ನೂತನ ಉತ್ಪನ್ನದ ಸಮಕಾಲೀನ ಅಂಶಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಧಾರವಾಡದಲ್ಲಿ ಇರುವ ಟಾಟಾ ಹಿಟಾಚಿ ಘಟಕದಲ್ಲಿ ಈ ನೂತನ ಸೂಪರ್ ಸೀರಿಸ್ Ex110 ಉತ್ಪಾದನೆ ಆಗಲಿದೆ.

ಮೊದಲು ಟೆಲ್ಕಾನ್ (ಟಾಟಾ ಮೋಟಾರ್ಸ್ ಅಂಗ ಸಂಸ್ಥೆ) ಎಂದೇ ಚಿರಪರಿಚಿತವಾಗಿದ್ದ ಸಂಸ್ಥೆ 1960 ರ ಪ್ರಾರಂಭದಿಂದಲೂ ನಿರ್ಮಾಣ ಉಪಕರಣ ವಲಯದಲ್ಲಿ ಅಗ್ರ ಸ್ಥಾನದಲ್ಲಿದೆ. ಭಾರತದಲ್ಲಿ ವಿಶ್ವದರ್ಜೆಯ ಹೈಡ್ರಾಲಿಕ್ ಎಕ್ಸ್‌ಕವೇಟರ್ಸ್ ತಯಾರಿಸುವ ಉದ್ದೇಶದಿಂದ 1984 ರಲ್ಲಿ ಜಪಾನಿನ ಹಿಟಾಚಿ ಕನ್‌ಸ್ಟ್ರಕ್ಷನ್ ಮೆಷಿನರಿ ಕಂಪನಿ ತಾಂತ್ರಿಕ ಸಹಯೋಗದೊಂದಿಗೆ ಕಾರ್ಯ ಆರಂಭಿಸಿತು. ನಿರ್ಮಾಣ ಉಪಕರಣಗಳ ವ್ಯವಹಾರ 1999 ರಲ್ಲಿ ಪ್ರತ್ಯೇಕ ಅಸ್ತಿತ್ವ ಪಡೆಯಿತು. ನಂತರದ ವರ್ಷಗಳಲ್ಲಿ ಎಚ್‌ಸಿಎಂ ಪ್ರಾಬಲ್ಯ ಹೊಂದಿತು.

ಭಾರತೀಯ ಹೈಡ್ರಾಲಿಕ್ ಎಕ್ಸ್‌ಕವೇಟರ್ ಮಾರುಕಟ್ಟೆಯಲ್ಲಿ ಅಗ್ರಸ್ಥಾನದಲ್ಲಿ ಇರುವ ಕಂಪನಿ, ತನ್ನ ಗ್ರಾಹಕರಿಗೆ ಅಗತ್ಯ ಇರುವ ಎಲ್ಲವನ್ನೂ ಒದಗಿಸುತ್ತಿದೆ. ಇದರಲ್ಲಿ ಹೈಡ್ರಾಲಿಕ್ ಎಕ್ಸ್‌ಕವೇಟರ್ಸ್, ಎಕ್ಸ್‌ಕವೇಟರ್ ಲೋಡರ್‌ಗಳು, ವೀಲ್ ಲೋಡರ್‌ಗಳು, ಸಾಯಿಲ್ ಕಂಪಾಕ್ಟರ್ಸ್, ಮೋಟಾರ್ ಗ್ರೇಡರ್ಸ್, ಟ್ರಾನ್ಸಿಟ್ ಮಿಕ್ಸರ್ಸ್ ಮತ್ತು ಡಂಪರ್ಸ್ ಸೇರಿದೆ. ಭಾರತದಲ್ಲಿ 30ಕ್ಕೂ ಅಧಿಕ ಮಾದರಿಯನ್ನು ಹಿಟಾಚಿ ಹೊಂದಿದೆ. ಎರಡು ಟನ್ ಸಾಮರ್ಥ್ಯದಿಂದ 800 ಟನ್ ಸಾಮರ್ಥ್ಯದ ಅದು ಹೊಂದಿದ್ದು ಗಣಿಗಾರಿಕೆ ಮತ್ತು ಮೂಲಭೂತ ಸೌಕರ್ಯ ಕ್ಷೇತ್ರದಲ್ಲಿ ಇವು ಬಳಕೆ ಆಗುತ್ತಿವೆ.